Series : X4YZW

SET ~ 4

ಅನುಕ್ರಮಾಂಕ ಸಂಖ್ಯೆ
Roll No.

Q.P. Code No. **15**

Candidates must write the Q.P. Code on the title page of the answer-book.

# ಕನ್ನಡ

# KANNADA

*ಅನುಮತಿಸಲಾದ ಸಮಯ : 3 ಗಂಟೆ* | *ಗರಿಷ್ಠ ಅಂಕಗಳು : 80*

*Time allowed : 3 hours* | *Maximum Marks : 80*

**ಸೂಚನೆ / NOTE** ~

(I) ಈ ಪ್ರಶ್ನೆಪತ್ರಿಕೆಯಲ್ಲಿ **15** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.

Please check that this question paper contains **15** printed pages.

(II) ಈ ಪ್ರಶ್ನೆ ಪತ್ರಿಕೆಯಲ್ಲಿ **13** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.

Please check that this question paper contains **13** questions.

(III) ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.

Q.P. Code given on the right hand side of the question paper should be written on the title page of the answer-book by the candidate.

(IV) ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಯಥಾಸ್ಥಾನದಲ್ಲಿ ಬರೆಯಿರಿ.

**Please write down the serial number of the question in the answer-book at the given place before attempting it.**

(V) ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು.

15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the candidates will read the question paper only and will not write any answer on the answer-book during this period.

**General Instructions :**

Read the following instructions carefully and follow :

1. This question paper is divided into **4** Sections.

   It has Total **13** questions.

2. **Section A :** 02 Question No. **1** to **2**.

3. **Section B :** 02 Question No. **3** to **4**.

4. **Section C :** 03 Question No. **5** to **7**.

5. **Section D :** 06 Question No. **8** to **13**.

   Attempt Questions as per specific instructions.

   Write Question No. in answer book before attempting it.

**ಸೂಚನೆಗಳು :**

**ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಪ್ರಶ್ನೆ ಪತ್ರಿಕೆಯು **4** ವಿಭಾಗಗಳನ್ನು ಒಳಗೊಂಡಿದೆ.

   ಈ ಪ್ರಶ್ನೆ ಪತ್ರಿಕೆಯಲ್ಲಿ ಒಟ್ಟು **13** ಪ್ರಶ್ನೆಗಳಿವೆ.

2. **ವಿಭಾಗ –A :** 02 ಪ್ರಶ್ನೆ ಸಂಖ್ಯೆ **1** to **2**.

3. **ವಿಭಾಗ –B :** 02 ಪ್ರಶ್ನೆ ಸಂಖ್ಯೆ **3** to **4**.

4. **ವಿಭಾಗ –C :** 03 ಪ್ರಶ್ನೆ ಸಂಖ್ಯೆ **5** to **7**.

5. **ವಿಭಾಗ –D :** 06 ಪ್ರಶ್ನೆ ಸಂಖ್ಯೆ **8** to **13**.

   ನೀಡಿರುವ ನಿರ್ದಿಷ್ಟ ಸೂಚನೆಗಳಂತೆ ಪ್ರಶ್ನೆಗಳಿಗೆ ಉತ್ತರಿಸಿ.

   ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಪ್ರಶ್ನೆ ಸಂಖ್ಯೆಯನ್ನು ನಮೂದಿಸಿ.

## Section – A
### (ವಾಚನ ಮತ್ತು ಗ್ರಹಿಕಾ ಕೌಶಲ : 10 ಅಂಕಗಳು)

1. ಕೆಳಗಿನ ಗದ್ಯಭಾಗವನ್ನು ಓದಿ, ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. 5 × 1 = 5

ಭಾರತ ... ಈ ಹೆಸರು ಕೇಳಿದೊಡನೆ ಇಡಿಯ ಜಗತ್ತು ತಲೆ ತಗ್ಗಿಸಿ ನಿಲ್ಲಬೇಕು. ಕಾರಣ ಜಗತ್ತು ಕಣ್ಬಿಡುವ ಮೊದಲೇ ನಾಗರಿಕತೆಯ ತುತ್ತತುದಿಯಲ್ಲಿದ್ದ ರಾಷ್ಟ್ರ ಇದು. ಹೀಗಾಗಿ ಇತರ ರಾಷ್ಟ್ರಗಳು ನಮಗಿದು ಗೊತ್ತಾಗಿದೆ ಎಂದು ಹೇಳುವ ನೂರಾರು ಸಾವಿರಾರು ವರ್ಷಗಳ ಹಿಂದೆಯೇ ಭರತ ಭೂಮಿಯಲ್ಲಿ ಆಗಿ ಹೋಗಿದ್ದವು. ಶುಲ್ಬ ಸೂತ್ರದಲ್ಲಿ ನಮ್ಮ ಗಣಿತಜ್ಞರು ಹೇಳಿರುವ ವಿಚಾರ ಸಾವಿರಾರು ವರ್ಷಗಳ ನಂತರ ಪೈಥಾಗೊರಸ್‌ನ ಅರಿವಿಗೆ ಬಂತು. ಗ್ರಹಗಳ ಚಲನೆಯ ಬಗ್ಗೆ ನಮ್ಮ ಪೂರ್ವಜರು ಕೊಟ್ಟಷ್ಟು ನಿಖರ ಮಾಹಿತಿ ಕೊಡಲು ಪಶ್ಚಿಮದ ವಿಜ್ಞಾನಿಗಳ ಅದೆಷ್ಟೋ ಪೀಳಿಗೆಗಳು ಕಳೆದು ಹೋದವು. ಭೂಗರ್ಭವಿರಲಿ, ರಸವಿದ್ಯೆಯಿರಲಿ, ಎಲ್ಲದರಲ್ಲೂ ನಾವೇ ಮುಂದು. ಜಗತ್ತಿನ ಅತ್ಯುತ್ಕೃಷ್ಟ ಸ್ಟೀಲ್ ತಂತ್ರಜ್ಞಾನವಿದ್ದಿದ್ದು ನಮ್ಮಲ್ಲಿ. ಈ ದೇಶದ ಹಳ್ಳಿಯ ಜನ ತಮ್ಮ ಮನೆಮನೆಗಳಲ್ಲಿ ಸ್ಟೀಲ್ ತಯಾರಿಸುವಷ್ಟು ಪರಿಣಿತಿ ಹೊಂದಿದ್ದರು. ಪ್ಲಾಸ್ಟಿಕ್ ಸರ್ಜರಿ ಮೊದಲು ನಡೆದದ್ದೇ ಸುಶ್ರುತನ ಕೈಚಳಕದಿಂದ. ಇತರ ದೇಶಗಳಲ್ಲಿ ವೈದ್ಯಕೀಯ ಶಾಸ್ತ್ರ ಕಣ್ಬಿಡುವ ಮೊದಲೇ ಆತ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆ ನಡೆಸಿದ್ದ. ಅತ್ತ ಕೃಷಿ ಪದ್ಧತಿಯೂ ಅಷ್ಟೇ ಉತ್ಕೃಷ್ಟವಾಗಿತ್ತು. ಚೀನಾವನ್ನು ಬಿಟ್ಟರೆ ಅತಿ ಹೆಚ್ಚು ಧಾನ್ಯೋತ್ಪಾದನೆಯಾಗುತ್ತಿದ್ದುದು ನಮ್ಮಲ್ಲೇ. ನಮ್ಮಲ್ಲಿ ಬೆಳೆಯುತ್ತಿದ್ದ ಕೃಷಿ ಪದಾರ್ಥಗಳಿಗೆ ಜಾಗತಿಕ ಬೇಡಿಕೆಯಿತ್ತು.

ಆದರೆ ಇವೆಲ್ಲವನ್ನೂ ಮೀರಿದ ಆಂತರಿಕ ಶಕ್ತಿಯೊಂದು ಭಾರತದ ರಕ್ಷಣೆಗೆ ಕಟಿಬದ್ಧವಾಗಿತ್ತು. ಅದು ಇಲ್ಲಿನ ವ್ಯವಸ್ಥೆ. ಆಧ್ಯಾತ್ಮದ ತಳಹದಿಯ ಮೇಲೆ ಕಟ್ಟಲ್ಪಟ್ಟಿದ್ದು. ಇಲ್ಲಿನ ವ್ಯವಸ್ಥೆಯ ಅಡಿಪಾಯವೇ ನಿಃಸ್ವಾರ್ಥ ! ಕುಟುಂಬ ಪದ್ಧತಿ, ನ್ಯಾಯ ವ್ಯವಸ್ಥೆ, ಆರೋಗ್ಯ – ಶಿಕ್ಷಣ ಎಲ್ಲೆಲ್ಲೂ ನಿಃಸ್ವಾರ್ಥವೇ ತುಂಬಿ ತುಳುಕಾಡುತ್ತಿತ್ತು. ಹೀಗಾಗಿ ಇಡಿಯ ರಾಷ್ಟ್ರ ಜಗತ್ತಿನ ಕಣ್ಣು ಕುಕ್ಕುವಷ್ಟು ಬೆಳೆದು ನಿಂತಿತ್ತು. ಈ ಎಲ್ಲ ಅಂಶಗಳಿಂದಾಗಿ ಭಾರತ ಬಲು ಬಲಿಷ್ಟವಾಗಿತ್ತು. ಇಂತಹ ಬಲಿಷ್ಠತೆಯೇ ಇಲ್ಲಿನ ಶ್ರೀಮಂತಿಕೆಯನ್ನು ಹೆಚ್ಚುಗೊಳಿಸಿದ್ದು. ಆ ಶ್ರೀಮಂತಿಕೆಯನ್ನು ಕಂಡೇ ದುರುಳರು ಆಗಮಿಸಿದ್ದು. ಶಕರು, ಹೂಣರು, ಮೊಘಲರು, ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಇಂಗ್ಲೀಷರು ಪ್ರತಿಯೊಬ್ಬರಿಗೂ ಸಂಪತ್ತು ಕೊಳ್ಳೆ ಹೊಡೆಯುವ ಇರಾದೆಯೇ ಇದ್ದಿದ್ದು. ಈ ನೆಪದಲ್ಲೆ ಅವರು ಬಹುರೂಪಿಗಳಾಗಿ ಭಾರತಕ್ಕೆ ಬಂದಿದ್ದು, ಕೊಳ್ಳೆ ಹೊಡೆದದ್ದು ಈಗ ಅದೆಲ್ಲವೂ ಇತಿಹಾಸ.

~

**ಪ್ರಶ್ನೆಗಳು :**

I. ಜಗತ್ತು ಕಣ್ಬಿಡುವ ಮೊದಲೇ ನಾಗರಿಕತೆಯ ತುತ್ತ ತುದಿಯಲ್ಲಿದ್ದ ರಾಷ್ಟ್ರ ಯಾವುದು ? **1**

(A) ಅಮೇರಿಕಾ (B) ಇಂಗ್ಲೆಂಡ್

(C) ಭಾರತ (D) ಜಪಾನ್

II. ಶುಲ್ಬ ಸೂತ್ರದಲ್ಲಿ ನಮ್ಮ ಗಣಿತಜ್ಞರು ಹೇಳಿರುವ ವಿಚಾರ ಯಾರ ಅರಿವಿಗೆ ಬಂತು ? **1**

(A) ಆರ್ಕಿಮಿಡೀಸ್ (B) ಪೈಥಾಗೊರಸ್

(C) ರಾಮಾನುಜನ್ (D) ಆರ್ಯಭಟ

III. ಇತರ ದೇಶಗಳಲ್ಲಿ ವೈದ್ಯಕೀಯ ಶಾಸ್ತ್ರ ಕಣ್ ಬಿಡುವ ಮೊದಲೇ ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆ ನಡೆಸಿದ ವ್ಯಕ್ತಿ ಯಾರು ? **1**

(A) ಹಿಪಾಕ್ರಟೀಸ್ (B) ಭಾಸ್ಕರ್

(C) ಸಿ.ವಿ. ರಾಮನ್ (D) ಸುಶ್ರುತ

IV. ಭಾರತದ ಕುಟುಂಬ ಪದ್ಧತಿ, ನ್ಯಾಯವ್ಯವಸ್ಥೆ, ಆರೋಗ್ಯ – ಶಿಕ್ಷಣ ಎಲ್ಲೆಲ್ಲೂ ಏನು ತುಂಬಿ ತುಳುಕುತಿತ್ತು ? **1**

(A) ಸ್ವಾರ್ಥ (B) ನಿಃಸ್ವಾರ್ಥ

(C) ನ್ಯಾಯ (D) ಅನ್ಯಾಯ

V. ಭಾರತಕ್ಕೆ ದುರುಳರು ಆಗಮಿಸಲು ಕಾರಣವೇನು ? **1**

(A) ಭಾರತದ ಸಂಪತ್ತನ್ನು ಕೊಳ್ಳೆ ಹೊಡೆಯಲು

(B) ಭಾರತದ ವೈದ್ಯಕೀಯ ಶಾಸ್ತ್ರ ಕಲಿಯಲು

(C) ಭಾರತವನ್ನು ಮುಂದುವರಿದ ರಾಷ್ಟ್ರವನ್ನಾಗಿ ಮಾಡಲು

(D) ಭಾರತದ ಸಂಸ್ಕೃತಿಯನ್ನು ಅರಿಯಲು

~

2. ಕೆಳಗಿನ ಗದ್ಯಭಾಗವನ್ನು ಓದಿ, ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. **5 × 1 = 5**

ದ್ರಾವಿಡ ಭಾಷೆಯ ಚೌಕಟ್ಟಿನಲ್ಲಿ ಅಳವಟ್ಟು ಸುಂದರವಾಗಿ ಅರಳಿರುವ ಭಾಷೆಯ ಕುಸುಮಗಳಲ್ಲಿ ಕನ್ನಡದ ಸ್ಥಾನ ಬಹಳ ಹಿರಿದು. ಇದು ಶ್ರೀಮಂತ ಸಾಹಿತ್ಯವನ್ನೊಳಗೊಂಡ ಪೂರ್ಣಕುಂಭ. ಇದರ ಇತಿಹಾಸ ಬಹು ಪ್ರಾಚೀನ. ಸಂಸ್ಕೃತ ಮತ್ತು ತಮಿಳು ಭಾಷೆಗಳನ್ನು ಬಿಟ್ಟರೆ ಕನ್ನಡ ಭಾಷೆಯೇ ನಮ್ಮ ದೇಶದಲ್ಲಿ ಬಹಳ ಪ್ರಾಚೀನವಾದದ್ದು. ಅಶೋಕನ ಶಿಲಾಶಾಸನಗಳ ಭಾಷೆಯಲ್ಲಿಯೇ ಕನ್ನಡ ಪದ ಕಂಡು ಬರುತ್ತದೆಂದು ವಿದ್ವಾಂಸರ ಅಭಿಪ್ರಾಯ. ಹಿಂದಿನ ಕಾಲದಲ್ಲಿ ಗ್ರೀಕರೂ, ರೋಮನ್ನರೂ ವ್ಯಾಪಾರಕ್ಕಾಗಿ ಪಶ್ಚಿಮ ತೀರದ ದೇಶಗಳಿಗೆ ಆಗಾಗ ಬರುತ್ತಿದ್ದು, ಹಾಗೆ ಬಂದ ಗ್ರೀಕರು ಇಲ್ಲಿಯ ಕನ್ನಡ ಭಾಷೆಯ ಪದಗಳನ್ನು ಸ್ವಲ್ಪ ಸ್ವಲ್ಪ ಕಲಿತಿದ್ದರೆಂಬುದು ಒಂದು ಪ್ರಾಚೀನ ಗ್ರೀಕ್ ನಾಟಕದಿಂದ ತಿಳಿದು ಬರುತ್ತದೆ. ಈ ಕಾರಣಗಳಿಂದ ಕ್ರಿ.ಶ. ಪೂರ್ವದಲ್ಲಿಯೇ ಕನ್ನಡ ಭಾಷೆ ವ್ಯವಹಾರದಲ್ಲಿತ್ತೆಂದು ಊಹಿಸಬಹುದಾಗಿದೆ. ಆದರೆ ಯಾವ ಚರ್ಚೆಗೂ ಅವಕಾಶವಿಲ್ಲದೆ ನಮಗೆ ಕನ್ನಡ ಭಾಷೆಯ ಅಸ್ತಿತ್ವದ ಬಗೆಗೆ ದೊರೆಯುವ ಮೊದಲನೆಯ ಆಧಾರವೆಂದರೆ ಕ್ರಿ.ಶ. 5 ನೆಯ ಶತಮಾನದ ಹಲ್ಮಿಡಿ ಶಾಸನ. ಈ ಶಾಸನದ ಕಾಲದಿಂದ ಮೊದಲ್ಗೊಂಡು 19 ನೆಯ ಶತಮಾನದವರೆಗೆ ಕನ್ನಡ ಭಾಷೆಯಲ್ಲಿ ಸತತವಾಗಿ ಸಾಹಿತ್ಯದ ಸೃಷ್ಟಿಯಾಗಿದೆ.

ವಂಶ ವರ್ಣನೆಗಾಗಿಯೋ, ದಾನ ವಿವರಣೆಗಾಗಿಯೋ, ವಿಭಿನ್ನ ರೀತಿಯ ಪ್ರಶಸ್ತಿಯನ್ನು ಹೇಳುವುದಕ್ಕಾಗಿಯೋ, ಗ್ರಾಮ, ಪ್ರದೇಶಗಳ ಸೀಮೋಲ್ಲೇಖನಕ್ಕಾಗಿಯೋ, ಮೃತ್ಯುವನ್ನು ಸ್ವಾಗತಿಸಿ, ಹುತಾತ್ಮರ ಲೋಕಕ್ಕೇರಿದ ಧೀರ ವ್ಯಕ್ತಿಗಳ ಸ್ಮಾರಕವಾಗಿಯೋ, ಪತಿಗಾಗಿ ಆತ್ಮಾರ್ಪಣೆ ಮಾಡಿಕೊಂಡ ಮಹಾಸತಿಯರಿಗಾಗಿಯೋ, ಜೈನ ಧರ್ಮದ ಸಲ್ಲೇಖನ ಮರಣದ ಸ್ಮರಣೆಗಾಗಿ ನಿಲ್ಲಿಸಿದ ನಿಷದಿಗಲ್ಲುಗಳಿಗಾಗಿಯೋ, ಧಾರ್ಮಿಕ ಸಿದ್ಧಿ ಪುರುಷರ ನೆನಪಿಗಾಗಿ ನಿಲ್ಲಿಸಿದ ಸ್ಮಾರಕಗಳಿಗಾಗಿಯೋ, ಶಾಸನಗಳನ್ನು ಖಂಡರಿಸಿದ್ದು, ಅವುಗಳಲ್ಲಿ ಕನ್ನಡ ಭಾಷೆಯನ್ನು ಬಳಸಲಾಗಿದೆ. ಪ್ರಾರಂಭದ ಶಾಸನಗಳಲ್ಲಿ ಸಂಸ್ಕೃತದ ಗಾಢವಾದ ಹಿಡಿತವಿರುವುದು ಕಂಡು ಬರುತ್ತದೆ. ಸಂಸ್ಕೃತವನ್ನೇ ಮಾದರಿಯಾಗಿಟ್ಟುಕೊಂಡು ಕನ್ನಡದ ಬರವಣಿಗೆಗೆ ತೊಡಗಿದುದು ಕಂಡು ಬರುತ್ತದೆ. ಹಲ್ಮಿಡಿ ಶಾಸನವನ್ನೇ ಕನ್ನಡ ಸಾಹಿತ್ಯದ ಉಗಮಸ್ಥಾನವೆನ್ನಲಾಗಿದೆ. ಈ ಶಾಸನದಿಂದ ಮೊದಲ್ಗೊಂಡು ಪ್ರಥಮ ಸಾಹಿತ್ಯ ಕೃತಿ ಲಭ್ಯವಾಗಿರುವವರೆಗಿನ ಕಾಲದಲ್ಲಿ ಉಪಲಬ್ದವಾದ ಶಾಸನಗಳಲ್ಲಿ ಕನ್ನಡ ಸಾಹಿತ್ಯದ ಸೃಷ್ಟಿ ವಿಪುಲವಾಗಿರುವುದು ಎದ್ದು ತೋರುತ್ತದೆ. ಬದಾಮಿ, ಮಾವಳಿ, ಶ್ರವಣಬೆಳಗೊಳ – ಮುಂತಾದ ಶಾಸನಗಳು ಈ ಮಾತಿಗೆ ಸಾಕ್ಷಿಯನ್ನು ನುಡಿಯುತ್ತ ಇಂದಿಗೂ ನಿಂತಿವೆ.

~

**ಪ್ರಶ್ನೆಗಳು :**

I. ದ್ರಾವಿಡ ಭಾಷೆಗಳಲ್ಲಿ ಕನ್ನಡಕ್ಕೆ ಯಾವ ಸ್ಥಾನವಿದೆ ? **1**

(A) ಪ್ರಥಮ (B) ಮೊದಲ

(C) ಕೊನೆಯ (D) ಹಿರಿದಾದ

II. ಭಾರತದಲ್ಲಿ ಕನ್ನಡ ಭಾಷೆಗಿಂತ ಪ್ರಾಚೀನವಾದ ಭಾಷೆಗಳು ಯಾವುವು ? **1**

(A) ಉರ್ದು ಮತ್ತು ಪರ್ಶಿಯನ್ (B) ಸಂಸ್ಕೃತ ಮತ್ತು ತಮಿಳು

(C) ತೆಲುಗು ಮತ್ತು ತಮಿಳು (D) ಹಿಂದಿ ಮತ್ತು ಮಲೆಯಾಳಿ

III. ಹಿಂದಿನ ಕಾಲದಲ್ಲಿ ಗ್ರೀಕರು ಕನ್ನಡ ಭಾಷೆಯ ಪದಗಳನ್ನು ಸ್ವಲ್ಪ ಸ್ವಲ್ಪ ಕಲಿತ್ತಿದ್ದರೆಂಬುದಕ್ಕೆ ಸಾಕ್ಷಿ ಏನು ? **1**

(A) ಹಲ್ಮಿಡಿ ಶಾಸನ (B) ಪ್ರವಾಸ ಕಥನ

(C) ಪ್ರಾಚೀನ ಗ್ರೀಕ್ ನಾಟಕ (D) ವಾಸ್ತು ಶಿಲ್ಪ

IV. ಕನ್ನಡ ಭಾಷೆಯಲ್ಲಿ ದೊರೆತ ಮೊದಲ ಶಾಸನ ಯಾವುದು ? **1**

(A) ಬದಾಮಿ (B) ಮಳವಳ್ಳಿ

(C) ಶ್ರವಣಬೆಳಗೊಳ (D) ಹಲ್ಮಿಡಿ

V. ನಿಷದಿಗಲ್ಲುಗಳನ್ನು ಯಾವ ಕಾರಣಕ್ಕಾಗಿ ನಿಲ್ಲಿಸಲಾಗುತ್ತದೆ ? **1**

(A) ವಂಶ ವರ್ಣನೆಗಾಗಿ

(B) ಪತಿಗಾಗಿ ಆತ್ಮಾರ್ಪಣೆ ಮಾಡಿಕೊಂಡ ಮಹಾಸತಿಯರಿಗಾಗಿ

(C) ಜೈನ ಧರ್ಮದ ಸಲ್ಲೇಖನ ಮರಣದ ಸ್ಮರಣೆಗಾಗಿ

(D) ದಾನ ವಿವರಣೆಗಾಗಿ

~

## Section – B

### (ಅನ್ವಯಿಕ ವ್ಯಾಕರಣ : 16 ಅಂಕಗಳು)

**3.** ಕೆಳಗೆ ವ್ಯಾಕರಣಾಂಶಗಳ ಬಹು ಆಯ್ಕೆಯ **10** ಪ್ರಶ್ನೆಗಳಿವೆ. ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿ. **10 × 1 = 10**

I. ಕೆಳಗಿನ ಪದದ ಸಂಧಿ ಹೆಸರಿಸಿ.

ನಲ್ಗತೆಯಂ **1**

(A) ಲೋಪ ಸಂಧಿ (B) ಆಗಮ ಸಂಧಿ

(C) ಆದೇಶ ಸಂಧಿ (D) ಸವರ್ಣದೀರ್ಘ ಸಂಧಿ

II. ಕೆಳಗಿನ ಪದದ ಸಮಾಸ ಹೆಸರಿಸಿ.

ರನ್ನಗಡಗ **1**

(A) ಅಂಶಿ ಸಮಾಸ (B) ತತ್ಪುರುಷ ಸಮಾಸ

(C) ಕರ್ಮಧಾರೆಯ ಸಮಾಸ (D) ದ್ವಂದ್ವ ಸಮಾಸ

III. ಕೆಳಗಿನ ಪದದ ಗ್ರಾಂಥಿಕ ರೂಪ ಬರೆಯಿರಿ.

ಬೈಬ್ಯಾಡ **1**

(A) ಬೈಯ್ಯಬೇಡ (B) ಬಡಿಬೇಡ

(C) ಬಾಯಿ ಬಿಡಬೇಡ (D) ಭಯ ಬೇಡ

IV. ಕೆಳಗಿನ ವಾಕ್ಯವನ್ನು ವರ್ತಮಾನ ಕಾಲಕ್ಕೆ ಪರಿವರ್ತಿಸಿ.

ಹಸುಗಳು ಹಾಲನ್ನು ಕೊಡುವವು. **1**

(A) ಹಸುಗಳು ಹಾಲನ್ನು ಕೊಟ್ಟವು. (B) ಹಸುಗಳು ಹಾಲನ್ನು ಕೊಡುತ್ತವೆ.

(C) ಹಸುಗಳು ಹಾಲನ್ನು ಕೊಡವು. (D) ಹಸುಗಳು ಹಾಲನ್ನು ಕೊಟ್ಟಾವು.

V. ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದದ ಧಾತುವನ್ನು ತಿಳಿಸಿ.

ಮಕ್ಕಳು ಶಾಲಾರಂಭದಲ್ಲಿ ಪ್ರಾರ್ಥನೆಯನ್ನು ಮಾಡುತ್ತಾರೆ. **1**

(A) ಪ್ರಾರ್ಥನೆ (B) ಮಕ್ಕಳು

(C) ಆರಂಭ (D) ಮಾಡು

~

VI. ಕೆಳಗಿನ ಪದ ಬಿಡಿಸಿ ಬರೆಯಿರಿ.

ತೃಷೆಯಾಗಲರಸುವನೆ 1

(A) ತೃಷೆ + ಯಾಗಲರಸುವನೆ (B) ತೃಷೆಯಾಗು + ಅರಸುವನೆ

(C) ತೃಷೆಯಾಗಲು + ಅರಸುವನೆ (D) ತೃಷೆಯಾಗ + ಲರಸುವನೆ

VII. ಕೆಳಗಿನ ಪದದಲ್ಲಿರುವ ವಿಭಕ್ತಿಯನ್ನು ತಿಳಿಸಿ.

ಸುಜ್ಞಾನದಿಂ 1

(A) ಪ್ರಥಮಾ ವಿಭಕ್ತಿ (B) ದ್ವಿತೀಯಾ ವಿಭಕ್ತಿ

(C) ತೃತೀಯಾ ವಿಭಕ್ತಿ (D) ಸಪ್ತಮಿ ವಿಭಕ್ತಿ

VIII. ಕೆಳಗಿನ ಪದದ ತತ್ಸಮ – ತದ್ಭವ ರೂಪ ಬರೆಯಿರಿ.

ಕವಿ 1

(A) ಲೇಖಕ (B) ಕಾವ್ಯ

(C) ಕಬ್ಬಿಗ (D) ಕಬ್ಬ

IX. ಕೆಳಗಿನ ಪದದ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಕುಸುಮ 1

(A) ಹೂವು, ಪುಷ್ಪ (B) ಕುಶಲ, ಕ್ಷೇಮ

(C) ಲತೆ, ಬಳ್ಳಿ (D) ಕುಸುಬಿ, ಎಳ್ಳು

X. ಕೆಳಗಿನ ಪದದ ಅನೇಕಾರ್ಥಗಳನ್ನು ಬರೆಯಿರಿ.

ಹೊಳೆ 1

(A) ಸೂರ್ಯ – ಚಂದ್ರ (B) ನದಿ – ಮಿಂಚು

(C) ಹಳ್ಳ – ಕೊಳ್ಳ (D) ಕೆರೆ – ಕಾಲುವೆ

~

4. ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಯಂತೆ ಉತ್ತರಿಸಿ.

I. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ ಛಂದಸ್ಸನ್ನು ಹೆಸರಿಸಿ. **2**

ಕಡೆದೊಡೆ ಪಾಲ್ಗಡಲ್ ವಿವಿಧ ವಸ್ತುವನೀಯದೆ ತೇಯೆ ಚಂದನಂ

II. ಕೆಳಗಿನ ಯಾವುದಾದರೊಂದು ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ. **2 × 1 = 2**

(i) ಬೇಲೀನೇ ಎದ್ದು ಹೊಲ ಮೇಯ್ದಂತೆ

(ii) ಚಿಂತೆಯೇ ಮುಪ್ಪು, ಸಂತೋಷವೇ ಯೌವನ

III. ಕೆಳಗಿನ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಬದಲಿಸಿ. **1**

ಮಕ್ಕಳು ಪ್ರದರ್ಶನ ಏರ್ಪಡಿಸಿದರು

IV. ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ. **1**

ಪರೀಕ್ಷೆಗಳು ಇದೇ ತಿಂಗಳು ನಡೆಯುತ್ತವೆ

## Section – C

### (ವಾಚನ ಮತ್ತು ಗ್ರಹಿಕಾ ಕೌಶಲ : 14 ಅಂಕಗಳು)

5. ಕೆಳಗಿನ ಪದ್ಯಭಾಗವನ್ನು ಓದಿ, ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. **5 × 1 = 5**

ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ
ಕೆಲವಂ ಸಜ್ಜನ ಸಂಘದಿಂದಲರಿಯಲ್ ಸರ್ವಜ್ಞನಪ್ಪಂ ನರಂ
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀಚೆನ್ನ ಸೋಮೇಶ್ವರಾ ॥

ಉಣದಿರ್ಪಾ ಧನಮಿರ್ದೊಡೇನು ಸುತನಿರ್ದೇಂ ಮುಪ್ಪಿನಲ್ಲಾಗದಾ
ಒಣಗಲ್ವೈರಿಗೆ ಬಾರದಿರ್ದ ಮಳೆ ತಾಂ ಬಂದೇನಾಪತ್ತಿನೊಳ್
ಮಣಿದುಂ ನೋಡದ ಬಂಧುವೇತಕೆಣಿಸಲ್ ಕಾಲೋಚಿತಕ್ಕೈದಿದಾ
ತೃಣವೇ ಪರ್ವತವಲ್ಲವೇ ಹರಹರಾ ಶ್ರೀಚೆನ್ನ ಸೋಮೇಶ್ವರಾ ॥

ಚಿಗುರೆಂದು ಮೆಲೆಬೇವು ಸ್ವಾದವಹುದೇ ಚೇಳ್ ಚಿಕ್ಕದೆಂದಳ್ಕರಿಂ
ತೆಗೆಯಲ್ ಕಚ್ಚದೆ ಪಾಲನೂಡಿ ಫಣಿಯಂ ಸಾಕಲ್ಕೆ ವಿಶ್ವಾಸಿಯೇ
ಖಗಮಂ ಸಾಕುವೆನೆಂದು ಗೂಗೆಮರಿಯಂ ಸಂಪ್ರೀತಿಯಂದೋವರೇ
ಪಗೆಯಂ ಬಾಲಕನೆಂಬರೇ ಹರಹರಾ ಶ್ರೀಚೆನ್ನ ಸೋಮೇಶ್ವರಾ ॥

ಇರಿಯಲ್ಬಲ್ಲೊಡೆ ವೀರನಾಗು ಧರೆಯೊಳ್ ನಾನಾ ಚಮತ್ಕಾರಮಂ
ಅರಿಯಲ್ಬಲ್ಲೊಡೆ ಮಂತ್ರಿಯಾಗು ವಿಭುವಾಗಾರೆಂದೊಡಂ ಕೋಪಮಂ
ತೊರೆಯಲ್ಬಲ್ಲೊಡೆ ಯೋಗಿಯಪ್ಪುದರಿ ಷಡ್ವರ್ಗಂಗಳಂ ಗೆಲ್ವೊಡೇ
ತೆರಬಲ್ಲ ಪೂರ್ಣೆಯಪ್ಪುದೈ ಹರಹರಾ ಶ್ರೀಚೆನ್ನ ಸೋಮೇಶ್ವರಾ ॥

**ಪ್ರಶ್ನೆಗಳು :**

I. ಹಲವು ಹಳ್ಳಗಳು ಸೇರಿ ಏನಾಗುತ್ತದೆ ? 1

(A) ಸರ್ವಜ್ಞನಪ್ಪಂ ನರಂ (B) ಸಮುದ್ರ
(C) ತೃಣ (D) ನಿರ್ಮಲ ಚಿತ್ತ

II. ನಿಷ್ಪ್ರಯೋಜಕನಾದ ಮಗ ಯಾರು ? 1

(A) ಆಪತ್ತಿನಲ್ಲಿ ಬಂದು ನೋಡದ ಬಂಧು
(B) ಪಗೆಯಂ ಬಾಲಕನೆಂಬರೇ
(C) ಮುಪ್ಪಿನಲ್ಲಿ ಸಹಾಯ ಮಾಡದ ಸುತ
(D) ಬಲ್ಲವರಿಂದ ಕಲಿಯದ ಮಗ

III. ಹಗೆಯನ್ನು ಏನೆಂದು ಉಪೇಕ್ಷಿಸಬಾರದೆಂದು ಸೋಮನಾಥನು ಹೇಳಿದ್ದಾನೆ ? 1

(A) ಚಿಗುರೆಂದು (B) ವಿಶ್ವಾಸಿಯೆಂದು
(C) ಗೂಗೆ ಮರಿಯೆಂದು (D) ಬಾಲಕನೆಂದು

IV. ವೀರನಾದವನು ಏನನ್ನು ಬಲ್ಲವನಾಗಿರಬೇಕು ? 1

(A) ನಾನಾ ಚಮತ್ಕಾರವನ್ನು (B) ಇರಿಯಲು
(C) ಅರಿಷಡ್ವರ್ಗಂಗಳನ್ನು ಗೆಲ್ಲಲು (D) ಕೋಪವನ್ನು ತೊರೆಯಲು

V. ಯಾರನ್ನು ಯೋಗಿ ಎನ್ನಬಹುದು ? 1

(A) ಅರಿಷಡ್ವರ್ಗಂಗಳನ್ನು ಗೆದ್ದವನನ್ನು (B) ನಾನಾ ಚಮತ್ಕಾರಗಳನ್ನು ಬಲ್ಲವನನ್ನು
(C) ಕೋಪವನ್ನು ತೊರೆದವನನ್ನು (D) ಇರಿಯಲು ಬಲ್ಲವನನ್ನು

6. ಕೆಳಗಿನ ಗದ್ಯ ಭಾಗವನ್ನು ಓದಿ, ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. **5 × 1 = 5**

ಚೆನ್ನೈನಲ್ಲಿ ಪದ್ಮಶೇಷಾದ್ರಿ ಬಾಲಭವನದ ಪ್ರೌಢಶಾಲೆಯಲ್ಲಿ ಕ್ವಿಜ್ ಕಾರ್ಯಕ್ರಮ. ಕ್ವಿಜ್ ಮಾಸ್ಟರ್ ಭಾರತರತ್ನ, ಕ್ಷಿಪಣಿ ಮನುಷ್ಯ ಅಬ್ದುಲ್ ಕಲಾಂ. ಏನೆಲ್ಲಾ ಪ್ರಶ್ನೆ ಕೇಳಬಹುದು ಅಂತ ವಿದ್ಯಾರ್ಥಿಗಳಿಗೆ ಕಾತುರ. ಕಲಾಂ ಅವರ ಪ್ರಶ್ನೆ ಹೀಗಿತ್ತು. "ಭೂಮಿ ಸೂರ್ಯನನ್ನು ಪರಿಭ್ರಮಿಸಲು ಒಂದು ವರ್ಷ ತೆಗೆದುಕೊಳ್ಳುತ್ತದೆ. ಹಾಗಿದ್ದಲ್ಲಿ ಹದಿನೈದನೇ ಪರಿಭ್ರಮಣ ಪಥದಲ್ಲಿದ್ದ ವ್ಯಕ್ತಿಗೆ ಎಷ್ಟು ವಯಸ್ಸಾಗಿರುತ್ತದೆ ?" ಈ ಪ್ರಶ್ನೆ ಕೇಳಿದ ಅನೇಕ ಮಕ್ಕಳು ತಬ್ಬಿಬ್ಬಾಗಿದ್ದರು. ಅಭಿಷೇಕ್ ಎಂಬ ಹುಡುಗ ಸ್ವಲ್ಪ ಯೋಚಿಸಿ, 'ಹದಿನಾಲ್ಕು' ಎಂದು ಉತ್ತರಿಸಿದ. ಉತ್ತರ ಸರಿಯಾಗಿತ್ತು. ಭೂಮಿಯ ಮೇಲೆ ನಿಂತಿದ್ದ ವ್ಯಕ್ತಿ ಹದಿನಾಲ್ಕು ಸುತ್ತು ಮುಗಿಸಿರುತ್ತಾನೆ ಅಲ್ಲವೆ ? ಕಲಾಂ ಅವರು ತಮ್ಮ ವಯಸ್ಸನ್ನು ಹೇಳುತ್ತಿದ್ದುದೂ ಹೀಗೆಯೆ. ಕಲಾಂ ಅವರು ಇದ್ದ ಮನೆಯ ಮುಂದೆ ಪುಟ್ಟ ಮಕ್ಕಳ ಹಿಂಡು ಯಾವಾಗಲೂ ಇರುತ್ತಿತ್ತು. ಗಹನವಾದ ವಿಷಯಗಳನ್ನು ಪುಟ್ಟ ಕತೆಗಳ ರೂಪದಲ್ಲಿ ಹೇಳುತ್ತಾ 'ಕಲಾಂ ಮೇಷ್ಟ್ರು' ಬದುಕಿನ ಸಾರ್ಥಕತೆ ಮೆರೆಯುತ್ತಿದ್ದರು. ಮಕ್ಕಳನ್ನು ಹತ್ತಿರ ಕೂರಿಸಿಕೊಂಡು ತಮ್ಮ ನೆನಪಿನ ಬುತ್ತಿ ಬಿಚ್ಚಿ ಅವರಿಗೆ ಉಣಬಡಿಸುತ್ತಿದ್ದರು. ನಮಗೆ ತಿಳಿದಿರಲಿ ಬಿಟ್ಟಿರಲಿ, ನಾವೆಲ್ಲಾ ಎಳೆಯರಾಗಿದ್ದಾಗಿನಿಂದ ಬದುಕಿನ ಅನೇಕ ಮಜಲುಗಳಲ್ಲಿ ಯಾರನ್ನಾದರೂ ಆದರ್ಶ ವ್ಯಕ್ತಿಗಳಾಗಿರಿಸಿಕೊಂಡೇ ಬೆಳೆದಿರುತ್ತೇವೆ. ನೀವು ಬೆಳೆಯುತ್ತಿರುವಾಗ, 15 ವರ್ಷ ತಲುಪುವವರೆಗೆ, ನಿಮಗೆ ತಾಯಿ, ತಂದೆ ಮತ್ತು ಶಾಲಾ ಶಿಕ್ಷಕರು ಆದರ್ಶ ಮಾದರಿಗಳು. ಆ ವಯಸ್ಸಿನಲ್ಲಿ ಮಾರ್ಗದರ್ಶನ ಮಾಡಲು ಅವರು ಅತ್ಯಂತ ಸಮರ್ಥರು. ಕಲಾಂ ಅವರ ಮಾತು ಚೆಣ್ಣರಿಗೆ ಅರ್ಥವಾಗಿತ್ತು.

ಮತ್ತೊಬ್ಬ ಹುಡುಗ ಪ್ರಶ್ನಿಸಿದ. "ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರಾಗಿರಬಹುದು ? ದಯವಿಟ್ಟು ಹೇಳಿ." ಕಲಾಂ ಹೇಳಿದರು, ನನಗನ್ನಿಸುತ್ತೆ, ವಿಜ್ಞಾನ ಹುಟ್ಟಿದ್ದು ಮತ್ತು ಈಗಲೂ ಜೀವಂತವಾಗಿರುವುದು ಪ್ರಶ್ನೆಗಳಿಂದ. ವಿಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು. ಕೊನೆಯಿಲ್ಲದಷ್ಟು ಪ್ರಶ್ನೆಗಳನ್ನು ಕೇಳುವವರು ಮಕ್ಕಳೇ ಎಂಬುದು ಪೋಷಕರಿಗೂ ಮತ್ತು ಶಿಕ್ಷಕರಿಗೂ ಚೆನ್ನಾಗಿ ಗೊತ್ತಿದೆ. ಆದ್ದರಿಂದ 'ಮಗುವೇ ಮೊದಲ ವಿಜ್ಞಾನಿ'. ಮಕ್ಕಳಿಗೆ ಉತ್ತರ ಹಿಡಿಸಿತ್ತು. ಚಪ್ಪಾಳೆ ತಟ್ಟಿ ಸಮ್ಮತಿ ಸೂಚಿಸಿದರು. ನೆರೆದಿದ್ದ ಶಿಕ್ಷಕರು ಮತ್ತು ತಾಯಿ – ತಂದೆಯರು ಮುಗುಳ್ನಕ್ಕರು.

**ಪ್ರಶ್ನೆಗಳು.**

I. ಚೆನ್ನೈನ ಪದ್ಮಶೇಷಾದ್ರಿ ಬಾಲಭವನದ ಪ್ರೌಢಶಾಲೆಯಲ್ಲಿ ನಡೆದ ಕ್ವಿಜ್ ಕಾರ್ಯಕ್ರಮದಲ್ಲಿ ಕ್ವಿಜ್ ಮಾಸ್ಟರ್ ಯಾರಾಗಿದ್ದರು ? **1**

(A) ಜಯಲಲಿತಾ
(B) ಡಾ॥. ಸುಬ್ರಮಣ್ಯನ್ ಚಂದ್ರಶೇಖರ್
(C) ಅಬ್ದುಲ್ ಕಲಾಂ
(D) ಸರ್. ಐಸಾಕ್ ನ್ಯೂಟನ್

~

II. ಮಕ್ಕಳಿಗೆ ಯಾವ ಕಾತುರ ಇತ್ತು ? 1

(A) ಕಲಾಂ ಅವರನ್ನು ನೋಡುವ

(B) ಏನೆಲ್ಲಾ ಪ್ರಶ್ನೆ ಕೇಳುವ

(C) ಕಾರ್ಯಕ್ರಮದಲ್ಲಿ ಭಾಗವಹಿಸುವ

(D) ಪ್ರಶ್ನೆಗಳಿಗೆ ಉತ್ತರ ನೀಡುವ

III. ಕಲಾಂ ಅವರ ಪ್ರಶ್ನೆಗೆ ಮಗುವಿನ ಸರಿಯಾದ ಉತ್ತರ ಏನಾಗಿತ್ತು ? 1

(A) 33 ವರ್ಷ (B) 15 ವರ್ಷ

(C) 16 ವರ್ಷ (D) 14 ವರ್ಷ

IV. ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರು ? 1

(A) ಆರ್ಯಭಟ (B) ಸಿ.ವಿ. ರಾಮನ್

(C) ಮಗು (D) ಅಬ್ದುಲ್ ಕಲಾಂ

V. ವಿಜ್ಞಾನದ ಅಡಿಪಾಯ ಯಾವುದು ? 1

(A) ಸಂಶೋಧನೆ ಮಾಡುವುದು

(B) ಆವಿಷ್ಕಾರ ಮಾಡುವುದು

(C) ವ್ಯವಸ್ಥಿತ ಅಧ್ಯಯನ ಮಾಡುವುದು

(D) ಪ್ರಶ್ನೆ ಕೇಳುವುದು

7. ಕೆಳಗಿನ ಗದ್ಯಭಾಗವನ್ನು ಓದಿ, ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. **4 × 1 = 4**

ಚಾರ್ಮಾಡಿ ಹತ್ತಿರದ ದಟ್ಟ ಕಾಡನ್ನು ಸರ್ಕಾರ ವಿಮ್‌ಕೋ ಕಂಪನಿಗೆ ಬೆಂಕಿಕಡ್ಡಿ ತಯಾರಿಕೆಗೆ ಮರಗಳನ್ನು ಕಡಿಯಲು ಗುತ್ತಿಗೆ ಕೊಟ್ಟಿತ್ತು. ಚಾರ್ಮಾಡಿ ಕಣಿವೆಯ ಪಾತಾಳದಲ್ಲಿದ್ದ ಮರಗಳನ್ನು ಲಾರಿ ದಾರಿಗೆ ಸಾಗಿಸಲು ಆನೆಯಲ್ಲದೆ ಮತ್ಯಾರಿಂದಲೂ ಸಾಧ್ಯವಿರಲಿಲ್ಲ. ಕೇರಳದಿಂದ ಆನೆಯನ್ನು ಬಾಡಿಗೆಗೆ ತರಲು ಯೋಚಿಸುತ್ತಿದ್ದ ವಿಮ್‌ಕೋ ಕಂಪನಿಯವರ ಬಳಿ ಕೃಷ್ಣೇಗೌಡ ಅದನ್ನು ತನಗೇ ಕಂಟ್ರಾಕ್ಟ್ ಕೊಡಿ ಎಂದು ಕೇಳಿದ. ಕೃಷ್ಣೇಗೌಡ ದೂರದ ಗೂಳೂರು ಮಠದ ಈ ಹೆಣ್ಣಾನೆಯನ್ನು ಕೊಂಡು ಮೂಡಿಗೆರೆಗೆ ತಂದಿದ್ದು ಆಗಲೇ. ಆನೆಯೊಡನೆ ಆನೆಯ ಮಾವುತ ವೇಲಾಯುಧನೂ ಸಂಸಾರ ಸಮೇತವಾಗಿ ಮೂಡಿಗೆರೆಗೆ ಆಗಮಿಸಿದ. ಆ ಆನೆಗೆ ಭಾರಿ ಹಣ ಕೊಟ್ಟು ತಂದೆ ಎಂದು ಕೃಷ್ಣೇಗೌಡ ಬಡಾಯಿ ಕೊಚ್ಚುತ್ತಿದ್ದುದೇ ಹೊರತು ಆತ ಕೊಟ್ಟ ಹಣ ನಿಜಕ್ಕೂ ಆ ಆನೆಯ ಬಾಲಕ್ಕೂ ಸಾಲದು.

ಮಠದವರು ಮೊದಲೇ ಈ ಆನೆಯನ್ನು ಆನೆಯ ಮಾವುತನನ್ನೂ ಯಾರಿಗಾದರೂ ದಾಟಿಸಬೇಕೆಂದು ನೋಡುತ್ತಿದ್ದುದರಿಂದ ಕೃಷ್ಣೇಗೌಡ ಆ ಆನೆಯನ್ನು ಕೇಳಿದ ಕೂಡಲೇ ವೇಲಾಯುಧ ಮಠದಲ್ಲಿ ಮಾಡಿದ್ದ ನಾಲ್ಕೈದು ಸಾವಿರ ಸಾಲ ಹಿಂದಿರುಗಿಸಿದರೆ ಸಾಕು ಎಂದು ಕೊಡಲು ಒಪ್ಪಿದರು.

ಎಲ್ಲಾ ತರಹದ ವ್ಯವಹಾರಗಳನ್ನೂ ಮಾಡಿ ಎಲ್ಲದರಲ್ಲೂ ನಷ್ಟ ಅನುಭವಿಸಿ ಸೋತು ಹೋಗಿದ್ದ ಕೃಷ್ಣೇಗೌಡ ಆನೆಯನ್ನು ತಂದಾಗ ಇಲ್ಲಿಗೆ ಇವನ ಕತೆ ಮುಗಿದಂತೆಯೇ ಎಂದು ಎಲ್ಲಾ ತೀರ್ಮಾನಿಸಿದರು. ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ ! ಮನೆ ಮಠ ಸಂಪೂರ್ಣ ಹಾಳು ಮಾಡಿಕೊಂಡು ಹೆಂಡತಿ ಮಕ್ಕಳ ಬಾಯಿಗೆ ಮಣ್ಣು ಹಾಕುವ ಕ್ಷಿಪ್ರ ಮಾರ್ಗ ಇದೆಂದು ಎಲ್ಲರೂ ದೃಢವಾಗಿ ನಂಬಿದ್ದರು. ಆದರೆ ಆಗಿದ್ದು ಇದರ ತದ್ವಿರುದ್ಧ ! ಮಠದಲ್ಲಿ ಬರಿ ಒಣಹುಲ್ಲು ಮೊಸರನ್ನ ತಿಂದು ಸೊರಗಿದ್ದ ಈ ಆನೆಗೆ ಬಯನೆ ಸೊಪ್ಪು, ಹಸಿಹುಲ್ಲು, ಹಿಂಡಿ, ಬೆಲ್ಲ ಗೆಣಸು ಎಲ್ಲ ಕೊಟ್ಟು ಕೃಷ್ಣೇಗೌಡ ಪಗಡುದಸ್ತಾಗಿ ಬೆಳೆಸಿದ. ಆನೆ ಮರ ಎಳೆದು ತಂದ ಬಾಡಿಗೆಯಿಂದ ಕೃಷ್ಣೇಗೌಡನಿಗೆ ಒಳ್ಳೆಯ ಲಾಭ ಬಂತು. ಕೃಷ್ಣೇಗೌಡ ದುಡ್ಡಿನ ಮುಖ ನೋಡಿದ್ದೇ ಆನೆ ಬಂದ ಮೇಲಿಂದ.

**ಪ್ರಶ್ನೆಗಳು.**

I. ಬೆಂಕಿ ಕಡ್ಡಿ ತಯಾರಿಕೆಗಾಗಿ ಮರ ಕಡಿಯಲು ಸರ್ಕಾರ ಯಾವ ಕಂಪನಿಗೆ ಗುತ್ತಿಗೆ ಕೊಟ್ಟಿತ್ತು ? 1

(A) ಇನ್ಫೋಸಿಸ್ (B) ಮೈಸೂರ್ ಸ್ಯಾಂಡಲ್ ಸೋಪ್

(C) ವಿಮ್‌ಕೋ (D) ವಿಪ್ರೋ

II. ಕೃಷ್ಣೇಗೌಡರು ಹೆಣ್ಣಾನೆಯನ್ನು ಮೂಡಿಗೆರೆಗೆ ಎಲ್ಲಿಂದ ತಂದಿದ್ದರು ? 1

(A) ಗೂಳೂರು ಮಠದಿಂದ (B) ಮೂರುಸಾವಿರ ಮಠದಿಂದ

(C) ಸಿದ್ಧಗಂಗಾ ಮಠದಿಂದ (D) ಅರಣ್ಯದಿಂದ

III. ಆನೆಯ ಮಾವುತನ ಹೆಸರೇನು ? 1

(A) ಜಬ್ಬಾರ್ (B) ಶಿವಪ್ಪ

(C) ವೇಲಾಯುಧ (D) ಪ್ರಕಾಶ

IV. ಮಠದಲ್ಲಿ ಆನೆ ಏನನ್ನು ತಿಂದು ಸೊರಗಿತ್ತು ? 1

(A) ಬಯನೆಸೊಪ್ಪು, ಹಸಿಹುಲ್ಲು (B) ಒಣಹುಲ್ಲು, ಮೊಸರನ್ನ

(C) ಹಿಂಡಿ, ಬೆಲ್ಲ (D) ಗೆಣಸು, ಬಾಳೆದಿಂಡು

~

## Section – D

**(ಪದ್ಯಗಳ ಅಧ್ಯಯನ, ಕವಿ ಪರಿಚಯ ಮತ್ತು ಸೃಜನಾತ್ಮಕ ಬರವಣಿಗೆ : 40 ಅಂಕಗಳು)**

8. ಕೆಳಗಿನ ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **3 × 2 = 6**

I. ನೀರಿಳಿಯದ ಕಂಟಲಲ್ಲಿ ಕಡುಬನ್ನು ತುರುಕಿದಂತಾಯ್ತು ಎಂದು ಮನೋರಮೆ ಹೇಳಿದ್ದೇಕೆ ?

II. ಉಳಿದ ನಾಲ್ವರು ಪಾಂಡವರ ಭಿನ್ನ ಸ್ವಭಾವಗಳ ಬಗ್ಗೆ ದ್ರೌಪದಿಯ ಅಭಿಪ್ರಾಯವೇನು ?

III. ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ ?

9. ಕೆಳಗಿನವುಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **3 × 3 = 9**

I. ಆತನ ಈಜಿಗೆ ಮೀನುಗಳೇ ನಾಚಬೇಕು

II. ಬಿಡುಗಡೆಗೆ ಹಾತೊರೆದು ರೈಟನ್ನೆ ರಾಂಗೆಂದಳೋ

**ಅಥವಾ (OR)**

ಗಂಜಿಗೂ ಗತಿಯಿಲ್ಲ

III. ನಂಗೇನು ಈ ನಾಯಿಗಳನ್ನು ಕಂಡರೆ ಪ್ರೀತಿನಾ ಸ್ವಾಮಿ ?

10. ಕೆಳಗಿನ ಕವಿ / ಲೇಖಕರಲ್ಲಿ ಯಾರಾದರೂ **ಒಬ್ಬರ** ಬಗ್ಗೆ **ಆರೇಳು** ವಾಕ್ಯಗಳಲ್ಲಿ ಬರೆಯಿರಿ. **1 × 3 = 3**

I. ಬಸವಣ್ಣ II. ಕುಮಾರ ವ್ಯಾಸ III. ದ.ರಾ. ಬೇಂದ್ರೆ

11. ಕೆಳಗಿನ ಪ್ರಶ್ನೆಗಳಿಗೆ **ಎಂಟು–ಹತ್ತು** ವಾಕ್ಯಗಳಲ್ಲಿ ಉತ್ತರಿಸಿ. **3 × 4 = 12**

I. ಪೋಷಕರು ಖಾಸಗಿ ಶಾಲೆಗಳ ಕಡೆ ಹೊರಳಲು ಲೇಖಕರು ಯಾವ ಕಾರಣಗಳನ್ನು ಉದಾಹರಿಸುತ್ತಾರೆ ?

**ಅಥವಾ (OR)**

ಬದುಕಿನಲ್ಲಿ ಆಯ್ಕೆಗಳು ಮುಖ್ಯ ಎಂಬುದನ್ನು ಲೇಖಕಿ ಹೇಗೆ ನಿರೂಪಿಸಿದ್ದಾರೆ ?

II. ಜಾಲಿಯ ಮರವು ನಿರುಪಯುಕ್ತವೆಂಬುದನ್ನು ಪುರಂದರದಾಸರು ಹೇಗೆ ನಿರೂಪಿಸಿದ್ದಾರೆ ?

**ಅಥವಾ (OR)**

ಶಿವಪಥವನ್ನರಿಯದವನ ಭಕ್ತಿ ನಿರರ್ಥಕವೆಂಬುದನ್ನು ಬಸವಣ್ಣನವರು ಯಾವ ಯಾವ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ ?

III. ಕೃಷ್ಣೇಗೌಡನ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು ?

**ಅಥವಾ (OR)**

ಅರಣ್ಯ ಇಲಾಖೆಯ ಶತ್ರುಗಳ ಕಾರ್ಯಭಾರವನ್ನು ನಾಗರಾಜ ವಿವರಿಸಿದ್ದು ಹೇಗೆ ?

12. ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ವಿಷಯದ ಬಗ್ಗೆ **150-200** ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. **1 × 5 = 5**

I. ಮಹಿಳಾ ಸಬಲೀಕರಣ

II. ಶೈಕ್ಷಣಿಕ ಪ್ರವಾಸದ ಮಹತ್ವ

III. ತ್ಯಾಜ್ಯ ವಸ್ತುಗಳ ಮರುಬಳಕೆಯ ಅಗತ್ಯ

13. ಕುಡಿಯುವ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡುವಂತೆ ಕೋರಿ ನಿಮ್ಮ ನಗರಸಭೆ / ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಪತ್ರ ಬರೆಯಿರಿ. **1 × 5 = 5**

**ಅಥವಾ (OR)**

ನಿಮ್ಮೂರಿನಲ್ಲಿ ಸರ್ಕಾರಿ ಆಸ್ಪತ್ರೆಯಿಲ್ಲದೆ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿ ಪತ್ರಿಕಾ ಸಂಪಾದಕರಿಗೆ ಪತ್ರ ಬರೆಯಿರಿ.

~